Tumbe Group of International Journals

# ವಚನ ಸಾಹಿತ್ಯದಲ್ಲಿ ವೈಚಾರಿಕತೆ

[1] ಕಲ್ಲಪ್ಪ ಎಂ ಬಿ

Publication
Tumbe
Group of International Journals
A Peer Reviewed Multidisciplinary Journal
Volume - 5 ; Issue – 1
January - April : 2022
ISSN : 2581-8511
Pages : 20 -27
Article ID : TUMBE0501K3

Author/s

[1]ಪಿಎಚ್.ಡಿ ಸಂಶೋಧನಾರ್ಥಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
ಮೋ : ೯೭೪೩೬೪೨೦೪೨
email. mbkallesh3@gmail.com

## ಸಾರಾಂಶ /Abstract

ಸಾಹಿತ್ಯ ಸಮಾಜದ ಒಂದು ಉತ್ಪಾದನ ಅಂಗ. ಇಲ್ಲಿ ನಡೆಯುವ ಪ್ರತಿಯೊಂದು ವಿಚಾರಗಳು ಆಯಾ ಕಾಲದೊಂದಿಗೆ ಸಂಬಂಧ ಹೊಂದಿರುತ್ತವೆ. ಒಂದು ಕಾಲದ ಬೆಳವಣಿಗೆ ಮತ್ತೊಂದು ಕಾಲಕ್ಕೆ ವೈರುಧ್ಯವಾಗಿಯೂ, ದ್ವಂದ್ವವಾಗಿ ಕಂಡುಬರುವುದು. ಇದನ್ನು ಕಂಡವರು ಮತ್ತೆ ಅವುಗಳಿಗೆ ಮುಖಾಮುಖಿಯಾಗಿ ನಿಲ್ಲುತ್ತಾರೆ. ಕನ್ನಡ ಸಾಹಿತ್ಯದಲ್ಲಿ ವಿಚಾರ ಪ್ರಧಾನವಾದ ಸಾಹಿತ್ಯಕ್ಕೆ ಒಂದು ಚೌಕಟ್ಟು ಇರಲಿಲ್ಲ. ಪ್ರಾಚೀನ ಕಾವ್ಯಗಳಲ್ಲಿ ವೈಚಾರಿಕತೆಯ ಸ್ವರೂಪ ಮೇಲ್ನೋಟಕ್ಕೆ ಗೊತ್ತಾಗುವುದಿಲ್ಲ. ಆದರೆ ಒಳಾರ್ಥ ಕಾವ್ಯದ ಅಂದರದಲ್ಲಿದೆ. ಮಧ್ಯಕಾಲಿನ ಸಂದರ್ಭದಲ್ಲಿ ವಚನಕಾರರು ತಮ್ಮ ನಿಲುವುಗಳನ್ನು ಬಹಳ ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾರೆ. ಹಾಗಾಗಿ ಕನ್ನಡದಲ್ಲಿ ವೈಚಾರಿಕತೆ ಎಂಬುದು ಇಲ್ಲಿಂದನೇ ಶುರುವಾಗುತ್ತದೆ. ಎಂದು ಹೇಳಬಹುದು. ಇದರ ವಿಚಾರಗಳನ್ನು ಮಾದರ ಚನ್ನಯ್ಯ, ಅಂಬಿಗರ ಚೌಡಯ್ಯ, ಬಸವಣ್ಣ, ಸತ್ಯಕ್ಕ, ಕಾಳವ್ವೆ, ಅಕ್ಕಮಹಾದೇವಿ ಮುಂತಾದ ವಚನಕಾರ ಮತ್ತು ವಚನಕಾರ್ತಿಯರ ವಚನಗಳ ಮೂಲಕ ಕಾಣಬಹುದು.

**ಪ್ರಮುಖ ಪದಗಳು:** ವಚನ ಸಾಹಿತ್ಯ, ವೈಚಾರಿಕತೆ, ಬಸವಣ್ಣ, ಮಾದರ ಚೆನ್ನಯ್ಯ, ವಚನ ಸಾಹಿತ್ಯ ಮತ್ತು ವೈಚಾರಿಕತೆ

**ಪೀಠಿಕೆ.**

ಧಾರ್ಮಿಕ ಚಳುವಳಿಯ ಒಂದು ಉಪ ಉತ್ಪನ್ನವಾಗಿ ವಚನ ಸಾಹಿತ್ಯ ರಚನೆಯಾಯಿತು. ಇಲ್ಲಿ ನೇರವಾಗಿ ಧಾರ್ಮಿಕ ನೆಲೆಯಲ್ಲಿ ಸೃಷ್ಟಿಸಿಕೊಂಡಿದ್ದರೂ, ಅಂತರಾಳದಲ್ಲಿ ಅನೇಕ ಮಜಲುಗಳು ವಿಸ್ತರಿಸಿಕೊಂಡಿವೆ. ಆರ್ಥಿಕ ಮೂಲದಿಂದ ಶುರುವಾಗಿ ಸಾಮಾಜಿಕ, ರಾಜಕೀಯ, ಪ್ರಭುತ್ವ, ಧಾರ್ಮಿಕ ವಿಚಾರಗಳನ್ನು ಒಳಗೊಂಡ ಅನೇಕ ಸಂಗತಿಗಳು ಎಳೆ ಎಳೆಯಾಗಿ ಬಿಚ್ಚಿಡುತ್ತವೆ. ಆ ಕಾಲಘಟ್ಟದಲ್ಲಿ ಇದ್ದ ವೈಧಿಕ ಧರ್ಮವು ಮಾನವೀಯ ಸಂಬಂಧಗಳಿಗೆ ಪೆಟ್ಟನ್ನು ನೀಡಿ, ಮಾನವಿಯತೆಯನ್ನು ಸುಟ್ಟುಹಾಕುವ ಸಂಚುಗಾರ ಕೆಲಸ ಮಾಡಲು ಶುರುಮಾಡಿತು. ಸಮಾಜದಲ್ಲಿ ಜಾತಿ, ವರ್ಣ, ವರ್ಗಗಳ ಅಸಮಾನತೆಯನ್ನು ಹುಟ್ಟುಹಾಕಿತು. ಜೈನ ಧರ್ಮವು ತನ್ನ ವ್ರತ, ಆಚರಣೆಗಳ ಮೂಲಕ ಭೋಗ, ಯೋಗದ ಪರಿಕಲ್ಪನೆಯನ್ನು, ಅಹಿಂಸೆಯನ್ನು ಅತಿಯಾಗಿ ನಂಬಿಕೊಂಡಿತ್ತು. ಸಲ್ಲೇಖನದಂತ ಮಾನವೀಯ ಹಿಂಸೆಗೆ ತಳ್ಳುವಂತ ಕೆಲಸವನ್ನು ನಿರ್ವಹಿಸಿತು. ಇನ್ನೊಂದು ಕಡೆ ಬೌದ್ಧ ಧರ್ಮವು ಮಾನವತವಾದದ ಮೂಲ ಬೇರು ಮತ್ತು ಜ್ಞಾನವನ್ನು ಮಧ್ಯಮ ಮಾರ್ಗದಲ್ಲಿ ಹೇಳಲು ಶುರುಮಾಡಿತು. ಆದರೆ ವೈಧಿಕ ಮತ್ತು ಜೈನ ಧರ್ಮ ಅದಕ್ಕೆ ಸ್ಥಾನ ನೀಡದೆ ನಾಶ ಮಾಡುವ ಕೆಲಸಗಳನ್ನು ಶುರುಮಾಡಿದವು. ಸಮಾಜದಲ್ಲಿ ರೂಪುಗೊಂಡಿದ್ದ ಜಡತ್ವವನ್ನು ವಿರೋಧಿಸುವ ಮತ್ತು ವೈಚಾರಿಕ ಅಲೋಚನೆಯನ್ನು ಹೊಂದಿದ್ದ ವಚನಕಾರರೂ ಸರ್ವರಿಗೂ ಸಮಾನತೆ ನೀಡಬೇಕು ಎಂಬ ಹಂಬಲದಿಂದ ವಚನ ಪರಂಪರೆಯನ್ನು ಮುಂದುವರೆಸಿದರು. ಇದರ ಭಾಗವಾಗಿ ರಚನೆಯಾದ ಹತ್ತನೇ ಶತಮಾನದಲ್ಲಿ ಶುರುವಾಗಿದ್ದ ಪಾಂಡಿತ್ಯ ಭಾಷೆಯನ್ನು ಬಿಟ್ಟು ಜನಸಾಮಾನ್ಯರಿಗೆ ಅರ್ಥವಾಗುವ ಜನಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದರು. ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕ, ಸಾಂಸ್ಕೃತಿಕವಾಗಿ ಬೇರು ಬಿಟ್ಟಿದ್ದ ವರ್ಣ ವ್ಯವಸ್ಥೆ, ಮೌಢ್ಯತೆ, ಕೊಳಕು ಸಂಪ್ರದಾಯ ಇವೆಲ್ಲವುಗಳನ್ನು ಪ್ರತಿರೋಧಿಸಿದ್ದು ವಚನ ಸಾಹಿತ್ಯ. ಇದನ್ನ ಒಂದು ದೊಡ್ಡ ಚಳವಳಿ ಎಂದು ಕರೆದರೂ ತಪ್ಪಾಗಲಾರದು. ಇಲ್ಲಿ ಭಕ್ತ-ಭವಿ ಎಂಬ ಭೇದದ ಮಿತಿಯಿದ್ದರೂ ಪ್ರಗತಿಪರ ಆಶಯ, ವರ್ಗ ಸಂಘರ್ಷದ ಅನೇಕ ಸೂಕ್ಷ್ಮಮತೆಗಳನ್ನು ಬಿಚ್ಚಿಡುತ್ತಾರೆ. ಅಷ್ಟೆ ಅಲ್ಲದೆ ಬಡವ- ಬಲ್ಲಿದ, ಮೇಲು-ಕೀಳು, ಗಂಡು-ಹೆಣ್ಣು ಮುಂತಾದ ಅಂಶಗಳು ಪರಸ್ಪರ ಸ್ಪಂಧಿಸುತ್ತವೆ. ಮನುಷ್ಯ ಸಂಬಂಧಗಳನ್ನು ಬೆಳಕಿಗೆ ತರಲು ಅವಣಿಸಿದ ವಚನ ಸಾಹಿತ್ಯ ತಮ್ಮ ವಚನಗಳ ಮೂಲಕ ಅನೇಕ ವಿಚಾರಗಳಿಂದ ಕ್ರಾಂತಿಯನ್ನು ಮಾಡಿದ್ದಾರೆ. ಅವು ವೈಚಾರಿಕತೆಯ ಭಾಗವಾಗಿಯೇ ಇವೆ.

ಮಾದಾರ ಚನ್ನಯ್ಯ, ಡೊಹರ ಕಕ್ಕಯ್ಯ, ಮಡಿವಾಳ ಮಾಚಿತಂದೆ, ಗೊಗ್ಗವ್ವೆ, ಗಾವುದಿ ಮಾಚಯ್ಯ, ವೈದ್ಯ ಸಂಗಣ್ಣ, ಘಟ್ಟಿವಾಳಯ್ಯ, ತಳವಾರ ಕಾಮದೇವಾ, ಕದಿರೆ ರೆಮ್ಮವ್ವ, ಮಾದಾರ ದೂಳಯ್ಯ, ಜೇಡರ ದಾಸಿಮಯ್ಯ, ಒಕ್ಕಲಿಗ ಮುದ್ದಣ್ಣ, ಬಾಚಿ ಕಾಯಕದ ಬಸವಯ್ಯ, ಬಸವಣ್ಣ, ಅಕ್ಕಮಹಾದೇವಿ, ಹಡಪದ ರೇಚಣ್ಣ, ಹಡಪದ ಅಪಣ್ಣ, ಅಂಬಿಗರ ಚೌಡಯ್ಯ, ಆಯ್ದಕ್ಕಿ ಮಾರಯ್ಯ. ಈ ಎಲ್ಲಾ ವಚನಕಾರರು ತಮ್ಮ ಕುಲಕಸುಬನ್ನು ಮಾಡುತ್ತಿದ ಕಾಯಕ ಜೀವಿಗಳು. ಅದೇ ಕಾಲಕ್ಕೆ ಅನುಭವದ ಮೂಲಕ ಸಾಮಾಜಿಕ ಸಂವೇದನೆಯನ್ನು ಹುಟ್ಟು ಹಾಕುತ್ತಿದ್ದರು. ತಮ್ಮಲ್ಲಿನ ನೆಲೆಗಳನ್ನು ಕಟ್ಟಿಕೊಳ್ಳುವುದರ ಜೊತೆಗೆ ತಾವಿರುವ ಸ್ಥಳಗಳನ್ನು ವಿಮರ್ಶಿಸಿ ಹೇಳುವುದನ್ನು ಬಿಡಲಿಲ್ಲ. ಈ ಕಾರಣದಿಂದಾಗಿ ವಚನ ಪರಂಪರೆಯು ಕುಲ-ನೆಲೆಗಳನ್ನು ಮೀರಿ ನಿಲ್ಲುತ್ತದೆ.

Tumbe Group of International Journals
ISSN: 2581-8511 Volume-5(1)2022

ಇಲ್ಲಿ ಅನೇಕ ಸಮುದಾಯಗಳು ಕೂಡಿಕೊಂಡಿವೆ. ಇವುಗಳನ್ನು ವಿಂಗಡಿಸಿ ನೋಡಲು ಬರುವುದಿಲ್ಲ. ಮಾದಾರ, ಡೊಹಾರ, ತಳವಾರ, ಮಡಿವಾಳ, ಅಂಬಿಗ, ಹಡಪದ, ಉಪ್ಪಾರ, ಒಕ್ಕಲಿಗ, ಕುರುಬ ಹೀಗೆ ಅನೇಕ ಸಮುದಾಯಗಳು ಒಂದೇ ವೇದಿಕೆಯಲ್ಲಿ ಚಿಂತಿಸಲು ಶುರುಮಾಡಿದ ಕಾಲ. ಇಲ್ಲಿ ಅವುಗಳದ್ದೇ ಆದ ಬಹು ಸಂಸ್ಕೃತಿಯನ್ನು ಬಿಂಬಿಸುವ ಮತ್ತು ಒಪ್ಪುವಂತ ವೈಚಾರಿಕ ಮತ್ತು ಬಹುತ್ವದ ನೆಲೆಗಳನ್ನು ಕಟ್ಟಿಕೊಂಡಿದ್ದವು. ಇವೆಲ್ಲವುಗಳು ವೈದಿಕಶಾಹಿಯನ್ನು ವಿರೊಧಿಸಿದರೆ ಮತ್ತೊಂದು ಕಡೆ ಸಾಮಾಜಿಕ ವಿಡಂಬನೆಯನ್ನು ಮಾಡುತ್ತಿದ್ದರು. ತಳಸ್ತರಿಗೆ ಮೌಖಿಕವಾಗಿ ಮಾತನಾಡಲು ಅವಕಾಶಗಳಿದ್ದ ಆ ಕಾಲದಲ್ಲಿ ಇದರಿಂದ ಯಾವುದೇ ಹಂಗು, ಮುಚ್ಚು ಮರೆಯಿಲ್ಲದೆ ಎಲ್ಲರೂ ತಮ್ಮ ನಿಲುವುಗಳನ್ನು ಹೇಳಲು ಶುರುಮಾಡಿದರು. ಈ ಕಾರಣದಿಂದ ಅಭಿವ್ಯಕ್ತಿ ಸ್ವಾತಂತ್ರ್ಯಯಕ್ಕೆ ಜಯಸಿಕ್ಕ ಕಾಲವಾಗಿದೆ. ಇದು ಬಹುತ್ವದ ಪ್ರತೀಕವಾಗಿತ್ತು. ಇಂದು ಇವೆಲ್ಲವುಗಳನ್ನು ಹರಣ ಮಾಡಲಾಗುತ್ತಿದೆ. ವಚನ ಪರಂಪರೆಯ ಎಲ್ಲಾ ವಿಚಾರಗಳಿಗೆ ವಿರುದ್ಧ ನಿಂತ ಕಾಲ ಇವತ್ತಿನದ್ದಾಗಿದೆ. ಯಾವ ಮೌಲ್ಯಗಳು ಮುನ್ನೆಲೆಗೆ ಬರಬೇಕೆ, ಬೇಡವೇ ಎಂಬುದಕ್ಕಿಂತ ಸರ್ವಾಧಿಕಾರತ್ವ ಮತ್ತು ಮನುತ್ವದ ವಿಚಾರಗಳಿಗೆ ಆಶಯ ತಾಣವಾಗುತ್ತಿದೆ. ಇವುಗಳನ್ನು ಬಿಡಿಸಿಕೊಳ್ಳುವ ಜವಬ್ದಾರಿಯನ್ನು ಕಂಡುಕೊಳ್ಳುವಂತ ವ್ಯವಸ್ಥೆಗೆ ವಚನ ಸಾಹಿತ್ಯಕ್ಕೆ ಮುಖಾಮುಖಿ ಮಾಡುವುದು ಅನಿವಾರ್ಯವಾಗಿದೆ.

ತಾಳಮಾನ ಸರಿಸಮವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲ ಸಂಗಮದೇವಾ
ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ. (ವಚನ ಸಾವಿರ, ಪು,ಸಂ, ೧೭೨.)

ಇದು ಹೀಗಾಗಲೇ ಇರುವ ಪಂಡಿತ ಪರಂಪರೆಯ ಭಾಷೆಗೆ ನೀಡಿದ ದೊಡ್ಡ ಪೆಟ್ಟು ಎಂದು ಭಾವಿಸಬಹುದು. ಇಲ್ಲಿಯವರೆಗೆ ಪ್ರಭುತ್ವವನ್ನು ಓಲೈಸಿಕೊಂಡು ಬಂದಿದ್ದ ಕವಿ ಮತ್ತು ಸಾಹಿತ್ಯವು ಏಕಕಾಲದಲ್ಲಿ ಪ್ರಭುತ್ವವನ್ನು ಧಿಕ್ಕರಿಸುವ ದಿಟ್ಟತನ ವಚನ ಸಾಹಿತ್ಯದಲ್ಲಿ ಕಂಡುಬರುವುದು. ಆ ಸಾಹಿತ್ಯದ ಪ್ರಭುದ್ದತೆಯನ್ನು ಎತ್ತಿಹಿಡಿಯುತ್ತದೆ. ಇದೇರಿತಿಯಾಗಿ ಮಾದಾರ ಚನ್ನಯ್ಯ ತನ್ನ ವಚನದಲ್ಲಿ ವೈದಿಕದ ವಿರುದ್ಧ ಹೇಳಿರುವುದು ಗಮನಾರ್ಹ.

ಸಾಂಖ್ಯ ಸ್ವಪಚ ಅಗಸ್ತ್ಯ ಕಬ್ಬಿಲ
ದುರ್ವಾಸ ಮಚ್ಚಿಗ ದಧೀಚಿ ಕೀಲಿಗ
ಕಶ್ಯಪ ಕಮ್ಮಾರ ರೋಮಜ ಕಂಚುಗಾರ
ಕೌಂಡಿಲ್ಯ ನವಿದನೆಂದರಿದು
ಮತ್ತೆ ಕುಲವುಂಟೆಂದು ಛಲಕ್ಕೆ ಹೊರಲೇತಕೆ ? (ವಚನ ಸಾವಿರ,ಪು,ಸಂ,೨೮೫.)

ಇಲ್ಲಿ ಋಷಿ ಮುನಿಗಳೆಂದರೆ ಬ್ರಾಹ್ಮಣರು ಎಂಬ ಕಲ್ಪನೆಯೆನ್ನು ಹೊಡೆದು, ಬಹುತೇಕರು ಕೆಳವರ್ಗದಿಂದ ಹುಟ್ಟಿ ಬಂದವರಾಗಿದ್ದಾರೆ. ವರ್ಣನೆಲೆಯನ್ನು ಹೊಂದಿದ ಈ ದೇಶದಲ್ಲಿ ಅದರ ಮೂಲ ಬೇರುಗಳನ್ನು ಬಿಚ್ಚಿಡುವ ಮೂಲಕ ಯಜಮಾನ ಸಂಸ್ಕೃತಿಯಾದ ವೈದಿ

ಕತೆ ವಿರುದ್ಧವಾಗಿ ಋಷಿ ಮುನಿಗಳ ಜಾತಿಯ ಮೂಲಕವೇ ಬ್ರಾಹ್ಮಣಿಕೆಯನ್ನು ಪ್ರಶ್ನಿಸುವುದು ಇಲ್ಲಿ ಸ್ಪಷ್ಟವಾಗುತ್ತದೆ. ಬೂಟಾಟಿಕೆಯ ಜೀವನ ನಡೆಸಿದ್ದರೂ, ಜಾತಿಯಲ್ಲಿ ಇರುವ ಶ್ರೇಷ್ಠತೆಯನ್ನು ಕಿತ್ತುಹಾಕಲಾಯಿತು. ವಾಸ್ತವದಲ್ಲಿ ಋಷಿಗಳೆಂದರೆ ಕೆಳವರ್ಗದವರು, ದಲಿತರು ಆಗಿರುದನ್ನು ಸೂಚಿಸುತ್ತದೆ.

ವೇದಕ್ಕೆ ಒರೆಯ ಕಟ್ಟುವೆ
ಶಾಸ್ತ್ರಕ್ಕೆ ನಿಗಳನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ
ಆಗಮದ ಮೂಗ ಕೊಯ್ಯುವೆ
ನೋಡಯ್ಯ ಮಹದಾನಿ ಕೂಡಲ ಸಂಗಮದೇವಾ
ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯ (ವಚನ ಸಾವಿರ ಪು,ಸಂ,೨೭೦.)

ಈ ವಚನದಲ್ಲಿ ವೇದ, ಆಗಮ, ಶಾಸ್ತ್ರಗಳನ್ನು ಟೀಕಿಸುವುದು ಬಹಳ ಸರಳವಾಗಿ ಕಂಡುಬರುತ್ತದೆ. ಆದರೆ ಅಂತರಾಳದಲ್ಲಿ ವಿಭಿನ್ನ ಆಲೋಚನೆಯ ತಾತ್ವಿಕತೆಯನ್ನು ಇದು ತೆರೆದು ತೋರಿಸುತ್ತದೆ. ವೇದಗಳನ್ನು ಮತ್ತು ಅದರ ಸಾರವನ್ನು ಒರೆಗೆ ಹಚ್ಚುವೆ. ಶಾಸ್ತ್ರಾದಿಗಳ ಯತಾರ್ಥ ಎಷ್ಟು ಎಂಬುದನ್ನು ಪರಿಶೀಲನೆ ಮತ್ತು ನಿಯಂತ್ರಣಕ್ಕೆ ಒಳಪಡಿಸುವುದು. ತರ್ಕದ ಬೆನ್ನ ಬಾರನೆತ್ತುವೆ ಎಂದರೆ ಚರ್ಮವನ್ನು ಹದಗೊಳಿಸಿದಂತೆ ಈ ವೇದಾಗಾಮನ, ಪುರಾಣಾದಿಗಳೆಲ್ಲವನ್ನು ಹದಗೊಳಿಸಿ ಎಂಬ ಅರ್ಥ ಬರುತ್ತದೆ. ಅಂದರೆ ಇವುಗಳಲ್ಲಿ ಇರುವ ಸಾರಸತ್ವವನ್ನು ಹೊರತೆಗೆದು ತೋರಿಸುವ ಉದ್ದೇಶವಾಗಿತ್ತು. ಇದರಲ್ಲಿ ವೇದ, ಶಾಸ್ತ್ರ, ತರ್ಕಗಳನ್ನು ವಿಡಂಬನೆ ಮಾಡಿರುವುದು ಕಂಡುಬರುತ್ತದೆ. ಆದರೆ ಇಲ್ಲಿ ಈ ಕೆಲಸವನ್ನು ಪ್ರಾರಂಭದ ವಚನಕಾರರಾದ ಮಾದಾರ ಚನ್ನಯ್ಯ, ಡೊಹಾರ ಕಕ್ಕಯ್ಯ, ಕೆಂಬಾವಿ ಬೋಗಯ್ಯ, ದೇವರ ದಾಸಿಮಯ್ಯ ಇವರೆಲ್ಲ ವೈಧಿಕ ವ್ಯವಸ್ಥೆಯನ್ನು ಪ್ರಶ್ನಿಸಿರುವುದನ್ನು ಬಸವಣ್ಣನವರು ಇಲ್ಲಿ ಗುರುತಿಸಿದ್ದಾರೆ.

ಕುರಿ ಕೋಳಿ ಕಿರುಮೀನು ತಿಂಬವರ
ಊರೊಳಗೆ ಇರು ಎಂಬರು
ಅಮೃತವ ಕರೆವ ಗೋವು ತಿಂಬವರ
ಊರಿಂದ ಹೊರಗಿರು ಎಂಬರು
ಆತನು ಹರಿಗೋಲಾಯಿತ್ತು ಬೊಕ್ಕಣ ಸಿದಿಕಿ ಬಾರುಕೋಲು ಪಾದರಕ್ಷೆ
ದೇವರ ಮುಂದೆ ಬರಿಸುವುದಕ್ಕೆ ಮದ್ದಳೆಯಾಯಿತು
ಈ ಬುದ್ದಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದ ಚಮ್ಮಾಳಿಗೆಯ ತೆಕ್ಕೊಂಡು
ಬಾಯ ಕೊಲ್ಲುವೆನು ಎಂದಾತ ನಮ್ಮ ಅಂಬಿಗರ ಚೌಡಯ್ಯ
(ವಚನ ಸಾವಿರ,ಪು,ಸಂ.೧೩೧)

ಕುರಿ ಕೋಳಿ ಕಿರುಮೀನು ತಿಂಬರಿಗೆಲ್ಲ
ಕುಲಜ ಕುಲಜ ಎಂತೆಂಬರು
ಪಶುಗೆ ಪಂಚಾಂಮೃತವ ಕರೆವ ಮಾದಿಗ ಕೀಳಿ ಜಾತಿಯೆಂಬರು
ಅವರೆಂತು ಕೀಳು ಜಾತಿಯಾದರು

ಜಾತಿಗಳನ್ನು ನಿವೇಕೆ ಕೀಳಾಗಿ ಕಾಣಿರೋ... ..
ಉರಿಲಿಂಗ ಪೆದ್ದಗಳರಸು ಬಲ್ಲನವ್ವಾ- ಕಾಳವ್ವೆ.
(ಕೆಳವರ್ಗದ ವಚನಕಾರರಲ್ಲಿ ಆಶಯ ಮತ್ತು ಅಭಿವ್ಯಕ್ತಿ.)

ಇಬ್ಬರು ವಚನಕಾರರು ಕೆಳವರ್ಗಕ್ಕೆ ಸೇರಿದವರು. ಸ್ವಭಾವತಃ ನೇರನುಡಿಯ, ನಿಷ್ಠುರವಾದಿ, ಆತ್ಮಭಿಮಾನಿಗಳಾಗಿದ್ದಾರೆ. ವೈಧಿಕ ವ್ಯವಸ್ಥೆ ರೂಪಿಸಿದ ಸಿದಾಂತವನ್ನು ಪ್ರಶ್ನಿಸುತ್ತಾರೆ. ಬ್ರಾಹ್ಮಣರ ಪ್ರಕಾರ ಗೋವು ಪವಿತ್ರ ಪ್ರಾಣಿ, ಇದು ಬೇರೆ ಪ್ರಾಣಿಗಿಂತ ಶ್ರೇಷ್ಠ ಎಂದು ಅವರು ನಂಬಿದ್ದಾರೆ. ಕುರಿ, ಕೋಳಿ, ಮೀನು ಇವು ಜೀವಂತ ಪ್ರಾಣಿಗಳು. ಇವನ್ನು ತಿನ್ನುವರೆಲ್ಲರೂ ಊರಿನ ಒಳಗಡೆ ಇದ್ದಾರೆ. ಆದರೆ ಪಶು ತಿನ್ನುವಂತ ಜನರನ್ನು ಯಾಕೇ ಹೊರಗಡೆ ಇಡಲಾಗುತ್ತಿದೆ. ಇಲ್ಲಿ ಎಲ್ಲಾ ಪ್ರಾಣಿಗಳಿಗೆ ಜೀವ ಇದೆ. ಯಾವುದು ಶ್ರೇಷ್ಠ-ಕನಿಷ್ಠ ಎಂಬುದಿಲ್ಲ. ಪಶು ತಿನ್ನುವ ಜಾತಿಯನ್ನು ಕೀಳು ಜಾತಿಯೆಂದು ಯಾಕೆ ಕರೆಯಬೇಕು ?. ಅವರು ಹೇಳಿದ ಮಾತ್ರಕ್ಕೆ ನಾವ್ಯಾಕೆ ಕೀಳೆಂದು ಭಾವಿಸಬೇಕು ?. ಎಂಬ ಆತ್ಮಾಭಿಮಾನದ ಮಾತುಗಳನ್ನು ಕಾಳವ್ವೆ ವ್ಯಕ್ತಪಡಿಸುತ್ತಾಳೆ. ಅಂಬಿಗರ ಚೌಡಯ್ಯ ಇದೇ ವಿಚಾರವನ್ನು ಪ್ರಸ್ತಾಪಿಸಿ, ವೃತ್ತಿಯಿಂದ ಪಡೆದುಕೊಂಡ ಉತ್ಪನ್ನಗಳನ್ನು ಬಳಕೆಮಾಡಿಕೊಂಡರು. ಜಾತಿಯಿಂದ ಹೊರಗಿಡುವ ಬ್ರಾಹ್ಮಣರನ್ನು 'ಗುಜ್ಜ ಹೊಲೆಯ' ಎಂದು ಖಂಡಿಸುತ್ತಾರೆ.

ಈ ಎರಡು ವಚನಗಳು ಕುಲ ಕಸುಬಿನಾಧಾರಿತ ಶ್ರಮ ವಿಭಜನೆಯನ್ನು ಹೇಳುತ್ತವೆ. ಸತ್ತ ಗೋವಿನ ಸಿದ್ದಲಿಕೆ, ಬುದ್ದಲಿಕೆ, ಸಗ್ಗಳಿಕೆ(ಬಾವಿಯಿಂದ ನೀರು ಎತ್ತುವುದು) ಸಿದ್ದಪಡಿಸುತ್ತಾರೆ. ಹಾಗೂ ಮದ್ದಳೆ ದೇವರ ಮುಂದೆ ಬಾರಿಸುವುದಕ್ಕೆ ವಿಶೇಷ ವಾದ್ಯವಾಗಿ ಬಳಕೆಯಾಗುತ್ತದೆ. ಈ ಸಿದ್ದಲಿಕೆಯಲ್ಲಿ ತುಂಬಿದ ತುಪ್ಪವನ್ನು ಬ್ರಾಹ್ಮಣರು ಹೋಳಿಗೆಗೆ ಹಾಕಿಕೊಂಡು ತಿನ್ನುತ್ತಾರೆ. ತೊಗಲ ಬಾನಿಯಿಂದ ಎತ್ತಿದ ನೀರನ್ನು ಪವಿತ್ರವೆಂದು ಅನೇಕ ಕಾರ್ಯಗಳಿಗೆ ಬಳಸುತ್ತಾರೆ. ಇಷ್ಟೆಲ್ಲ ಬಳಸಿಕೊಂಡ ಬ್ರಾಹ್ಮಣರು ತೋರುವ ಜಾತಿಬೇಧದ ಹೀನ ನೀತಿಯನ್ನು ಈ ಇಬ್ಬರು ಖಂಡಿಸುತ್ತಾರೆ. ಇಲ್ಲಿ ಗೋವಿನ ಬಳಕೆಯಲ್ಲಿನ ಮೇಲು-ಕೀಳು ಜಾತಿಗೆ ಸಮೀಕರಿಸಿ ತಾರ್ಕಿಕ ಪಲ್ಲಟಗೊಳಿಸಿದ ಬ್ರಾಹ್ಮಣರ ಬುದ್ದಿಗೇಡಿತನವನ್ನು ಪ್ರಶ್ನಿಸುತ್ತಾರೆ. ಕಾಳವ್ವೆಯ ಇನ್ನೊಂದು ವಚನದಲ್ಲಿ ಪ್ರಾಣಿಗಳನ್ನು ಹೋಮಕ್ಕಾಗಿ ಬ್ರಾಹ್ಮಣರು ಕೊಂದಿರುವ ಸಾಕ್ಷಿಯನ್ನು ನೀಡುತ್ತಾಳೆ.

ಕೃತಯುಗದಲ್ಲಿ ಮುವತ್ತೆರಡು ಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ
ಕುಂಜರನೆಂಬ ಆನೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು,
ತ್ರೇತಾಯುಗ ಹದಿನಾರು ಲಕ್ಷ ವರುಷದಲ್ಲಿ ಬ್ರಾಹ್ಮಣರು ಹೋಮವನ್ನಿಕ್ಕುವಾಗ
ಅಶ್ವನೆಂಬ ಕುದುರೆಯ ಕೊಂದು ಹೋಮನಿಕ್ಕಿದರು ಬ್ರಾಹ್ಮಣರು.
ಕಲಿಯುಗದಲ್ಲಿ ನಾಲ್ಕು ಲಕ್ಷ ವರುಷದಲ್ಲಿ ಹೋಮನಿಕ್ಕುವಾಗ
ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ.
(ಇಪ್ಪತ್ತೈದು ವಚನಕಾರ್ತಿಯರ ಜೀವನ ಹಾಗೂ ಸಾಧನೆ, ಪು.ಸಂ,೫೨.)

ಬ್ರಾಹ್ಮಣರೂ ಕೂಡ ಯಜ್ಞ ಮಾಡುವಾಗ ಆನೆ, ಕುದುರೆ, ಆಡು ಮುಂತಾದ ಪ್ರಾಣಿಗಳನ್ನು ಧರ್ಮದ ಹೆಸರಿನಲ್ಲಿ ಕೊಂದು ತಿಂದಿರುವುದು ಇಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ
ರಂಜನಯಲ್ಲದೆ ಅದರ ಗಂಜಳ ಬಿಡದಣ್ಣ
ಮಣ್ಣು ಪುತ್ತಳಿಯ ಮಾಣದೆ ಜಲದಲ್ಲಿ ತೊಳೆದರೆ
ನಿಚ್ಚ ನಿಚ್ಚ ಕೆಸರಹುದಲ್ಲದೆ ಅದರಚಗಚು ಗಬಿಡಣ್ಣ
ಲೋಕದ ಮಾನವರಿಗೆ ಶಿವದೀಕ್ಷೆಯ ಕೊಟ್ಟರೆ
ಕೆಟ್ಟವನೇಕೆ ಸದ್‌ಭಕ್ತನಹನು ಕೂಡಲಸಂಗಮದೇವಾ.

(ಬಸವಣ್ಣನವರವಚನಗಳಲ್ಲಿ ಮಾನವತವಾದ, ಪು.ಸಂ,೨೫೬).

ಸಗಣಿಯಿಂದ ಮಾಡಿದ ಬೆನಕನಿಗೆ ಸಂಪಿಗೆಯ ಹೂವಿನಿಂದ ಪೂಜಿಸಿದರೆ ಅದು ಕೇವಲ ಅಲಂಕಾರವಾಗುವುದಲ್ಲದೇ ತನ್ನ ಮೂಲ ಗುಣವನ್ನು ಬಿಡುವುದಿಲ್ಲ. ಅದೇ ರೀತಿ ಮಣ್ಣಿನಿಂದ ಮಾಡಿದ ಗೊಂಬೆಗೆ ನಿತ್ಯ ತೊಳೆದರು ಅದರ ಕೆಸರು ಹೆಚ್ಚುವುದಲ್ಲದೆ ಅದು ಶುದ್ದಿಯಾಗಲಾರದು. ಹಾಗೆಯೇ ಸಾಮಾನ್ಯ ಮಾನವನಿಗೆ ಶಿವದೀಕ್ಷೆಯನ್ನು ಕೊಟ್ಟರೂ ಆತ ಸದ್ಭಕ್ತನಾಗಲಾರ. ಶಿವದೀಕ್ಷೆ ಸಾಮಾನ್ಯರಿಗೆ ಸಲ್ಲಲಾರದು ಎಂಬುದನ್ನು ಹೇಳುವ ಮೂಲಕ ವ್ರತಭ್ರಷ್ಟರ ಬಗ್ಗೆ ಹೇಳುತ್ತದೆ. ಸಾಮಾನ್ಯ ಜನರು ತಾವು ಪೂಜಿಸುತ್ತಿದ್ದ ಬೆನಕ. ಸಗಣಿಯಿಂದ ಮಾಡಿದ ವಸ್ತುವಿಗೆ ಪೂಜೆ ಮಾಡಿ, ಅದಕ್ಕೆ ದೈವಭಕ್ತಿಯನ್ನು ನೀಡಿದರು. ಅದರ ಸಾಮಾಜಿಕ ವಿಡಂಬನೆಯನ್ನು ಈ ವಚನ ವಿವರಿಸುತ್ತದೆ. ಪ್ರಕೃತಿಯಲ್ಲಿ ಪ್ರತಿಯೊಂದು ವಸ್ತುವು ತನ್ನದೆಯಾದ ಮೂಲ ಗುಣವನ್ನು ಹೊಂದಿರುತ್ತವೆ. ಮಾನವನನ್ನು ಬೇರೆ ಬೇರೆ ಮೂಲಗಳನ್ನು ಇಟ್ಟುಕೊಂಡು ಅವುಗಳಿಗೆ ದೈವಿಕ ಭಾವನೆ, ಪೂಜೆ, ಆಚರಣೆ ಮಾಡಿದ ಕಾರಣಕ್ಕೆ ಅವು ತನ್ನ ಗುಣವನ್ನು ಕಳೆದುಕೊಳ್ಳುವುದಿಲ್ಲ. ಲೋಕದಲ್ಲಿ ಬದುಕಿರುವ ಪ್ರತಿಯೊಬ್ಬ ಸಾಮಾನ್ಯರಿಗೆ ಶಿವದೀಕ್ಷೆಯನ್ನು ಕೊಟ್ಟರೂ ಅವರಲ್ಲಿರುವ ಮೂಲ ಗುಣಗಳನ್ನು ಬಿಟ್ಟು ಬದುಕುವುದಿಲ್ಲ. ಹಾಗಾಗಿ ಇಲ್ಲಿ ವ್ರತಭ್ರಷ್ಟತೆ ಮತ್ತು ವಸ್ತುಗಳಿಗೆ ಇರುವ ಭಿನ್ನತೆಯನ್ನು ವಿಡಂಬನೆ ಮಾಡುವುದನ್ನು ಗುರುತಿಸಬಹುದು.

ಅರ್ಚನೆ ಪೂಜನೆ ನೇಮವಲ್ಲ ಮಂತ್ರ ತಂತ್ರ ನೇಮವಲ್ಲ;
ದೀಪದೀಪಾರತಿ ನೇಮವಲ್ಲ?
ಪರಧನ ಪರಸ್ತ್ರೀ ಪರದೈವಗಳಿಗೆ ಎರಗದಿಪ್ಪುದೆನೇಮ
ಶಂಭುಜಕೇಶ್ವರನಲಿ ಇವು ಕಾಣಿರಣ್ಣಾ ನಿತ್ಯನೇಮ

(ಇಪ್ಪತ್ತೈದು ವಚನಕಾರ್ತಿಯರ ಜೀವನ ಹಾಗೂ ಸಾಧನೆ, ಪು.ಸಂ,೫೨.)

ಭಾರತದಂತ ದೇಶದಲ್ಲಿ ದೈವಭಕ್ತಗೆ ನೀಡಿದಷ್ಟು ಸ್ಥಾನಮಾನ, ಬೇರೆ ಯಾವ ದೇಶದಲ್ಲಿ ನೀಡಿಲ್ಲ. ದಿನದ ಬಹುತೇಕ ಸಮಯವನ್ನು ಪೂಜೆ, ವ್ರತ, ಮಂತ್ರ, ತಂತ್ರ ಇತ್ಯಾದಿಗಳನ್ನು ಮಾಡುವುದರಲ್ಲಿ ನಿರತರಾಗಿದ್ದಾರೆ. ಅಷ್ಟೇ ಅಲ್ಲ. ನೇಮದ ಹೆಸರಿನಲ್ಲಿ ಅವುಗಳನ್ನು ಮಾಡಿದ ಮಾತ್ರಕ್ಕೆ ನೇಮ ನಿವಾರಣೆ ಎಂದು ಭಾವಿಸಬೇಕಾಗಿಲ್ಲ. ಇಂದಿನ ಜ್ಯೋತಿಷ್ಯರು ಮತ್ತು ಮಠ-ಮಾನ್ಯಗಳಲ್ಲಿ ಬಹುತೇಕ ಸ್ವಾಮಿಗಳು ನೇಮದ ನೆಪ ಹೇಳಿ ಬೇರೆಯವರ ಹಣ, ಸ್ತ್ರೀ, ದೈವಗಳಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಅನೇಕ ಮಹಿಳೆಯರಿಗೆ ಈ ಮೇಲಿನವುಗಳ ಆಚರಣೆಯ ನೆಪದಲ್ಲಿ ಅವರ ಮೇಲೆ ಲೈಂಗಿಕ ದೌರ್ಜನ್ಯಗಳೂ ನಡೆದಿವೆ. ಹಾಗಾಗಿ ನೆಪಮಾತ್ರಕ್ಕೆ ಅದನ್ನು

ನೇಮ ಎಂದು ಕರೆದರೆ ಹೇಗೆ ಒಪ್ಪಲು ಸಾಧ್ಯ. ಮಾನವ ತಾನು ಮಾಡುವ ಅರ್ಚನೆ, ಪೂಜೆ, ಮಂತ್ರ, ತಂತ್ರ ದೀಪಗಳನ್ನು ಅಷ್ಟೇ ನೇಮ ಎಂದು ಭಾವಿಸಿದರೆ ಸಾಲದು. ಆತನು ಪರಧನ, ಪರಸ್ತ್ರೀÃ ಪರದೈವಗಳಿಗೆ ಎರಗದಿರುವುದು ನೇಮ. ಇಂದಿನ ಮಠಮಾನ್ಯಗಳಲ್ಲಿ ಆದ ಬೆಳವಣಿ, ಪೂಜಾರಿಯ ಹೆಸರಿನಲ್ಲಿ ನಡೆಯುವ ನೇಮ ಇವೆಲ್ಲವುಗಳು ನೇಮ ಅಷ್ಟೇ ಆಗಿಲ್ಲ.

ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆ?
ಎರಡಕ್ಕೂ ಹೇಳಲಿಲ್ಲಯ್ಯ !
ಗುಹೇಶ್ವರ ನೀನು ಕಲ್ಲಾದರೆ ನಾನೇನಪ್ಪನಾ?
(ವಚನ ಸಾವಿರ, ಪು,ಸಂ,೧೮೦.)

ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ
ಹೊಟ್ಟಡಿಯಾಗಿ ಬೀಳುವ
ಲೊಟ್ಟೆ ಮೂಳನ ಕಂಡರೆ
ಮೆಟ್ಟಿದ ಎಡವ ಪಾದರಕ್ಷೆಯ ತೆಗೆದುಕೊಂಡು
ಲಟಲಟನೆ ಹೊಡಿ ಎಂದಾತನಂಬಿಗರ ಚೌಡಯ್ಯ

ಬಸವಣ್ಣನವರು ದೇಹವೇ ದೇಗುಲ, ಎಂದು ಹೇಳಿದಂತೆ. ಅಲ್ಲಮನೂ ಕೂಡ ದೇಹವನನು ದೇವಾಲಯವಾಗಿಸಿದ್ದಾರೆ. ಇಲ್ಲಿ ಸ್ಥಾವರ ಮತ್ತು ಜಂಗಮಶೀಲತ್ವ ಎರಡನ್ನು ಹೇಳುತ್ತದೆ. ಜಂಗಮ ಸ್ವರೂಪಿಯಾದ 'ದೇಹ' ಎಂದು ಒಪ್ಪಿಕೊಂಡ ಮೇಲೆ ಮತ್ತೆ ಬೇರೆ ದೇವಾಲಯದ ಅವಶ್ಯಕತೆ ಇಲ್ಲ. ಇದೇ ಮಾತುಗಳನ್ನು ಅಂಬಿಗಯ್ಯ ಚೌಡಯ್ಯ ಬಹಳ ಕಟುವಾಗಿ ವಿಡಂಬಿಸುತ್ತಾನೆ. ತನ್ನಲ್ಲಿ ಇಟ್ಟುಕೊಂಡಿರುವ ಇಷ್ಟಲಿಂಗ. ಇದು ತನಗೆ ದಕ್ಕುವ ಸಮಯಕ್ಕೆ ಬಳಕೆ ಮಡಿಕೊಳ್ಳಬಹುದು. ತಾನು ಅನುಸರಿಸುವ ನಿಯಮಗಳು ಇದಕ್ಕೆ ಹೊರತಾಗಿರುವುದಿಲ್ಲ. ತನ್ನಲಿರುವುದನ್ನು ಬಿಟ್ಟು ಸ್ಥಾವರ ಸ್ವರೂಪದ ಲಿಂಗಕ್ಕೆ ನಮಸ್ಕಾರ ಮಾಡುವ ಮಾನವನನ್ನ ಮೂಳ ಎಂದು ನಿಂದಿಸಿ, ಅವರಿಗೆ ಶಿಕ್ಷೆಯಾಗಿ ಪಾದರಕ್ಷೆಗಳಿಂದ ಹೊಡಿ ಎಂದು ಹೇಳುತ್ತಾನೆ. ಇದೇ ಮಾತುಗಳನ್ನು ಜಿ ಎಸ್ ಶಿವರುದ್ರಪ್ಪ ತನ್ನ ಕಾವ್ಯದಲ್ಲಿ ಎಲ್ಲೊ ಹುಡುಕಿದೆ ಇಲ್ಲದ ದೇವರ ಎಂದು ಹೇಳುತ್ತಾರೆ. ಇಲ್ಲಿ ದೇವಾಲಯ, ದೇವರ ಮೂರ್ತಿಗಳ ನಿರಾಕರಣೆ. ಸಾಮಾನ್ಯ ಜನರು ತಾವು ಬಳಸುವ ತನ್ನೊಂದಿಗೆ ಇಷ್ಟಲಿಂಗವೇ ದೇವರೆಂದು ದೇಹವನ್ನು ಒಪ್ಪಿಕೊಂಡಿರುವುದನ್ನು ಈ ವಚನ ವಿವರಿಸುತ್ತದೆ.

ವೇದಶಾಸ್ತ್ರ ಆಗಮ ಪುರಾಣಗಳೆಲ್ಲ
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಬೋ
ಇವ ಕುಟ್ಟಲೇಕೆ ?ಕುಸುಕಲೇಕೆ
ಅತ್ತಲಿತ್ತ ಹರಿವ ಮನವ ಶಿರವನರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ,
(ವಚನ ಕಮ್ಮಟ, ಪು, ಸಂ,೭೪)

ಅಕ್ಕ ಮಹಾದೇವಿಯೂ ಕೂಡ ಇಂದಿನ ವೈದಿಕ ವ್ಯವಸ್ಥೆಯನ್ನು ವಿರೋಧಿಸಿದ್ದು ಇವೆಲ್ಲವುಗಳ ಅರಿವು ಅವಳಿಗೆ ಇದೆ. ತನ್ನ ಮನವನ್ನು ಅತೋಟಿಯಲ್ಲಿ ಇಟ್ಟುಕೊಳ್ಳಬೇಕಾದ ಅನಿರ್ವಾಯತೆಯನ್ನು ಈ ವಚನ ವಿವರಿಸುತ್ತದೆ. ಮುಕ್ತಾಯಕ್ಕ ತನ್ನ ಒಂದು ವಚನದಲ್ಲಿ ಈ ರೀತಿಯಾಗಿ ಹೇಳುತ್ತಾಳೆ.

**ಉಪಸಂಹಾರ**

ಒಟ್ಟಾರೆಯಾಗಿ ಹನ್ನೆರಡನೆ ಶತಮಾನದಲ್ಲಿ ವಚನಕಾರರು ವೈಚಾರಿಕತೆಯ ಕಿಡಿಗಳಾಗಿದ್ದಾರೆ. ಅದು ಅವರ ವಚನಗಳ ಮೂಲಕ ಸ್ಪಷ್ಟವಾಗುತ್ತದೆ. ಅವರಿಂದಲೇ ವೈಚಾರಿಕ ವಿಚಾರಗಳನ್ನು ಅಭಿವ್ಯಕ್ತಿಸುವ ಪರಂಪರೆಗೆ ದೊಡ್ಡ ಆಶ್ರಯ ಮತ್ತು ಅವಕಾಶಗಳು ಲಭ್ಯವಾದವು. ಕಾಯಕ ನಿರತರಾದ ವಚನಕಾರರು ತಮ್ಮ ವೃತ್ತಿಯಲ್ಲಿಯೇ ವೈಚಾರಿಕತೆಯನ್ನು ಕಂಡುಕೊಂಡಿದ್ದಾರೆ. ಅದರಲ್ಲಿ ಅವರ ತಾತ್ವಿಕ ನಿಲುವುಗಳಿವೆ. ವಚನಕಾರರಿಗೆ ಅವರು ಹುಟ್ಟಿ ಬೆಳೆದ ಸಾಮಾಜಿಕ ಪರಿಸರದಲ್ಲಿನ ಸಂಘರ್ಷಗಳೇ ಪ್ರತಿರೋಧಗಳನ್ನು ವ್ಯಕ್ತಪಡಿಸುವುದಕ್ಕೆ ಮೂಲವಾಗಿವೆ. ಸಾಮಾಜಿಕ ವ್ಯವಸ್ಥೆಯಲ್ಲಿನ ಕೇವಲ ಒಂದು ವರ್ಗದ ಹಿತಾಸಕ್ತಿಗಳನ್ನು ವಿರೋಧಿಸುತ್ತಾ, ಎಲ್ಲರ ಸಾಮಾಜಿಕ ಕಾಳಜಿ, ಸಮಾನತೆಗಾಗಿ ವಚನಕಾರರು ವೈಚಾರಿಕ ಕ್ರಾಂತಿಯನ್ನೆ ಮಾಡಿದ್ದಾರೆ. ಇದರ ಮೂಲಕ ಇಂದಿಗೂ ಸ್ವ ಹಿತಾಸಕ್ತಿಯ ಯಜಮಾನ್ಯ ವರ್ಗ ಬಲವಂತವಾಗಿ ಹೇರುತ್ತಿರುವ ಏಕತ್ವದ ಚಿಂತನೆಗೆ ಪ್ರತಿರೋಧವಾಗಿ, ಬಹುತ್ವದ ಆಶಯವನ್ನು ವಚನಕಾರಲ್ಲಿ ಕಾಣಬಹುದಾಗಿದೆ. ಹಾಗಾಗಿ ವಚನ ಮತ್ತು ವಚನಕಾರರ ವೈಚಾರಿಕ ಚಿಂತನೆ ಎಂದೆಂದಿಗೂ ಸಮಕಾಲೀನವಾಗಿ ನಿಲ್ಲುತ್ತವೆಂಬುದನ್ನು ಹೆಮ್ಮೆಯಿಂದಲೇ ಹೇಳಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**

[1] ಕಲಬುರ್ಗಿ ಎಂ ಎಂ, ೨೦೧೦, ಮಾರ್ಗ ಸಂಪುಟ ೪, ಸಪ್ನ ಬುಕ್ ಹೌಸ್, ಬೆಂಗಳೂರು.

[2] ಜಗದಾಂಬ ಮಲ್ಲೇದೇವರು, ೧೯೮೭, ಇಪ್ಪತ್ತೈದು ವಚನಕಾರ್ತಿಯರ ಜಿವನ ಹಾಗೂ ಸಾಧನೆ, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರು ಸಾವಿರ ಮಠ ಹುಬ್ಬಳಿ.

[3] ನಾಗಭೂಷಣಸ್ವಾಮಿ ಓ ಎಲ್, ೨೦೧೪, ವಚನ ಸಾವಿರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

[4] ಬರಗೂರು ರಾಮಚಂದ್ರಪ್ಪ, ೧೯೯೩, ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ, ಸಾಹಿತ್ಯ ಅಕಾಡೆಮಿ, ಬೆಂಗಳೂರು.

[5] ಬಸವರಾಜ ಸಿದ್ದಾಶ್ರಮ, 2011, ಅಂಬಿಗರ ಚೌಡಯ್ಯ ಆರೋಪಿಸಿದಾಗ, ಸಿದ್ದಿ ಪ್ರಕಾಶನ, ಧಾರವಾಡ.

[6] ಮರುಳಸಿದ್ದಪ್ಪ ಕೆ, ನಾಗರಾಜ ಕಿ, ರಂ, ೨೦೧೨, ವಚನ ಕಮ್ಮಟ, ಸಪ್ನ ಬುಕ್ ಹೌಸ್, ಬೆಂಗಳೂರು.

[7] ಮಹಾದೇವಿ ಹಿರೇಮಠ, ೨೦೦೭, ಬಸವಣ್ಣನವರ ವಚನಗಳಲ್ಲಿ ಮಾನವತವಾದ, ಲಿಂಗಾಯತ ಅಧ್ಯಯನ ಅಕಾಡೆಮಿ, ನಾಗೂನೂರು ರುದ್ರಾಕ್ಷಿಮಠ, ಬೆಳಗಾವಿ.

[8] ಯಲ್ಲಪ್ಪ ಹಿಮ್ಮಡಿ, ೨೦೧೧, ವೈಚಾರಿಕ ಸಾಹಿತ್ಯ ಮೀಮಾಂಸೆ, ಸುಶೀಲ್ ಪ್ರಕಾಶನ, ತೆರೆದಾಳು.